**ಡಿ.ಡಬ್ಲ್ಯೂ-1**

**ದಿನಾಂಕಃ27-6-2016 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಎಲ್.ಸಿ. ವಕೀಲರಿಂದ ಃ**

ದಿಃ08-11-1973 ರಲ್ಲಿ ನನ್ನ ತಂದೆ ಪಡೆದಪ್ಪ ಮೃತಪಟ್ಟಿರುತ್ತಾರೆಂದರೆ ಸರಿ. ನನ್ನ ತಾಯಿ ನೀಲಮ್ಮ ದಿಃ13-03-1981 ರಂದು ಮೃತಪಟ್ಟಿರುತ್ತಾರೆಂದರೆ ಸರಿ. ನನ್ನ ತಂದೆ ತಾಯಿಗೆ ಇಬ್ಬರು ಗಂಡು ಮಕ್ಕಳು, 6 ಜನ ಹೆಣ್ಣು ಮಕ್ಕಳಿರುತ್ತಾರೆ. ಅವರುಗಳೆಂದರೆ ನಾನು, ರಾಚಪ್ಪ, ಪಾರ್ವತಮ್ಮ, ಶಾರದಮ್ಮ, ಅನ್ನಪೂರ್ಣ, ರತ್ನಕುಮಾರಿ, ಶಾಂತ, ಹೇಮಲತಾ ಇರುತ್ತೇವೆ. ಇವರ ಪೈಕಿ ರಾಚಪ್ಪ, ಪಾರ್ವತಮ್ಮರವರು ಮೃತಪಟ್ಟಿರುತ್ತಾರೆ. ರಾಚಪ್ಪನವರು ಮದುವೆಯಾಗದೇ ಮೃತಪಟ್ಟಿರುತ್ತಾರೆಂದರೆ ಸರಿ.

ನಾನು ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿ ದಾವಾಸ್ತಿಗೆ ಸಂಬಂಧಿಸಿದ ಬೇರೆ ದಾಖಲೆಗಳು ಇರುವುದಿಲ್ಲ, ನಿಪಿ-13, 14 ರ ದಾಖಲೆಯ ಪ್ರಕಾರ ಸಾಲ 1974 ರಲ್ಲಿ ತೀರುವಳಿಯಾಗಿರುತ್ತದೆಂದರೆ ಸರಿ. ಅದನ್ನು ನನ್ನ ತಂದೆ ಮೃತಪಟ್ಟ ನಂತರ ನಾನು ತೀರುವಳಿ ಮಾಡಿರುತ್ತೇನೆ. ನಿಪಿ-13 ಮತ್ತು 14 ರ ದಾಖಲೆಗಳನ್ನು ಹೊರತುಪಡಿಸಿ ಉಳಿದ ದಾಖಲೆಗಳ ಪ್ರಕಾರ ಸಾಲವನ್ನು ನನ್ನ ತಂದೆ ಜೀವಿತ ಕಾಲದಲ್ಲಿಯೇ ತಿರುವಳಿ ಮಾಡಿರುತ್ತಾರೆಂದರೆ ಸರಿಯಲ್ಲ, ನನ್ನ ತಂದೆಗೆ ಮೆದುಳಿಗೆ ಪಾರ್ಶ್ವವಾಯು ಆದ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ, ನನ್ನ ತಂದೆಗೆ ಪಾರ್ಶ್ವವಾಯು ಆದ ಬಗ್ಗೆ ಕುಟುಂಬದವರಿಗೆ ಮತ್ತು ಬೇರೆಯವರಿಗೂ ಗೊತ್ತಿರುತ್ತದೆ. ಸದರಿ ವಿಚಾರವನ್ನು ರುಜುವಾತುಮಾಡಲು ಬೇರೆಯವರನ್ನು ನಾನು ಸಾಕ್ಷಿ ಮಾಡುವ ಬಗ್ಗೆ ಯೋಚನೆ ಮಾಡಿರುವುದಿಲ್ಲ.

ದಿಃ13-12-2013 ರಂದು ಅನ್ನಪೂರ್ಣಮ್ಮನವರು ಪ್ರದೀಪ್‌ರವರ ಹೆಸರಿಗೆ ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿ. ಸಾಕ್ಷಿಗೆ ಈಗ ಸದರಿ ಅಧಿಕಾರ ಪತ್ರವನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ, ಓದಿ, ಒಪ್ಪಿದ ಕಾರಣ ಅದನ್ನು ನಿಪಿ-1 ಎಂದು ಗುರ್ತಿಸಲಾಯಿತು. ದಿಃ3-11-2013 ರಂದು ಶಾಂತರವರು

ಪ್ರದೀಪ್‌ರವರ ಹೆಸರಿಗೆ ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿ. ಸಾಕ್ಷಿಗೆ ಈಗ ಸದರಿ ಅಧಿಕಾರ ಪತ್ರವನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ, ಓದಿ, ಒಪ್ಪಿದ ಕಾರಣ ಅದನ್ನು ನಿಪಿ-2 ಎಂದು ಗುರ್ತಿಸಲಾಯಿತು. ನಾನು ಮುಖ್ಯ ವಿಚಾರಣೆಯಲ್ಲಿ ಅಧಿಕಾರ ಪತ್ರದ ಬಗ್ಗೆ ತಿಳಿದಿರುವುದಿಲ್ಲ ಎಂದು ಹೇಳಿದ್ದೇನೆಂದರೆ ಸರಿ.

ಅರಸೀಕೆರೆ, ಗಂಗಾವತಿಯಲ್ಲಿರುವ ಆಸ್ತಿಗಳನ್ನು ನನ್ನ ತಂದೆ ಸಂಪಾದನೆ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆ-ತಾಯಿ ಯಾವುದೇ ಮರಣ ಶಾಸನ ಪತ್ರವನ್ನು ಬರೆದಿರುವುದಿಲ್ಲ, ಪಡೆದಪ್ಪ ಅಂಡ್ ಸನ್ಸ್ ಹೆಸರಿನಲ್ಲಿ ಫರ್ಮ್ ಇತ್ತು ಈಗ ಅದು ಮುಚ್ಚಲ್ಪಟ್ಟಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳು ನನ್ನ ಬಳಿ ಇರುವುದಿಲ್ಲ, ಸದರಿ ಫರ್ಮ್‌ನ ಪಾಲುದಾರಿಕೆ ಪತ್ರ ನೊಂದಣಿಯಾಗಿತ್ತು.

ದಿಃ02-12-2012 ರಂದು ನಾನು ಸುಬ್ಬಾರೆಡ್ಡಿ ಎನ್ನುವವರಿಗೆ ಗಂಗಾವತಿಯಲ್ಲಿರುವ ಆಸ್ತಿ ನಂಃ12 ನ್ನು 11,20,000 ರೂ.ಗಳಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿ. ದಿಃ02-02-2012 ರಂದು ಸುಬ್ಬಾರೆಡ್ಡಿ, ರಾಜಶೇಖರ್ ರೆಡ್ಡಿರವರಿಗೆ 2 ಆಸ್ತಿಗಳನ್ನು ಮಾರಾಟ ಮಾಡಿರುತ್ತೇನೆಂದರೆ ಸರಿ.

ದಿಃ20-10-2003 ರಲ್ಲಿ ನಾನು ಡಾ. ಬಿ.ಎಸ್.ನಾಗಭೂಷಣ ರಾವ್ ಮತ್ತು ಅವರ ಹೆಂಡತಿಗೆ ಅರಸೀಕೆರೆಯಲ್ಲಿರುವ ಆಸ್ತಿಯನ್ನು 1,20,000 ರೂ.ಗಳಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿ. ದಿಃ06-02-2006 ರಲ್ಲಿ ಸರೋಜ ಬಿ.ಎಸ್. ರವರಿಗೆ ಅರಸೀಕೆರೆಯಲ್ಲಿರುವ ಆಸ್ತಿಯನ್ನು 7,60,000 ರೂ.ಗಳಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿ. ದಿಃ08-09-2003 ರಲ್ಲಿ ಮಾಂದಿಲಾಲ್ ಬನ್ಸಾರವರಿಗೆ 1,80.000 ರೂ.ಗಳಿಗೆ ಅರಸೀಕೆರೆಯ ಆಸ್ತಿ ಮಾರಾಟ ಮಾಡಿರುತ್ತೇನೆಂದರೆ ಸರಿ. ಗಂಗಾವತಿ ಮತ್ತು ಅರಸೀಕೆರೆಯಲ್ಲಿರುವ ಆಸ್ತಿಗಳನ್ನು ಒಟ್ಟು 65 ಲಕ್ಷಕ್ಕಿಂತ ಹೆಚ್ಚು ಹಣಕ್ಕೆ ಮಾರಾಟ ಮಾಡಿರುತ್ತೇನೆಂದರೆ ಸರಿ.

ನನಗೆ ಇಬ್ಬರು ಗಂಡು ಮಕ್ಕಳು ಮತ್ತು 1 ಹೆಣ್ಣು ಮಗಳು ಇರುತ್ತಾರೆ. ನನ್ನ ಇಬ್ಬರು ಗಂಡು ಮಕ್ಕಳು ಬೆಂಗಳೂರು ಮತ್ತು ಸೌದಿ ಅರೇಬಿಯಾದಲ್ಲಿ ಕೆಲಸ

ಮಾಡುತ್ತಿದ್ದಾರೆ. ನನ್ನ ಮೊದಲನೇ ಮಗ ಬಿ.ಬಿ.ಎಂ. ವಿದ್ಯಾಭ್ಯಾಸವನ್ನು ಹಾಸನ ಬಿ.ವಿ.ಕರೀಗೌಡ ಕಾಲೇಜ್‌ನಲ್ಲಿ ಮಾಡಿರುತ್ತಾರೆ. ಆತನ ವಿದ್ಯಾಭ್ಯಾಸಕ್ಕೆ ಒಟ್ಟು 5 ಲಕ್ಷ ಖರ್ಚಾಗಿರುತ್ತದೆ. 2 ನೇ ಮಗ ಬಿ.ಕಾಂ ವಿದ್ಯಾಭ್ಯಾಸ ಮಾಡಿದ್ದು ಆತನ ವಿದ್ಯಾಭ್ಯಾಸಕ್ಕೆ 3 ಲಕ್ಷ ರೂ. ಖರ್ಚಾಗಿರುತ್ತದೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ನನ್ನ ಮಗಳ ಮದುವೆಗೆ 10 ಲಕ್ಷ ಖರ್ಚಾಗಿರುತ್ತದೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ನನ್ನ ತಂದೆ ಮಾರ್ಕೆಟ್‌ನಲ್ಲಿ ಮಾಡಿದ 3 ಲಕ್ಷ ರೂ. ಸಾಲವನ್ನು ಕ್ರಯದ ಹಣದಿಂದ ತೀರುವಳಿ ಮಾಡಿರುತ್ತೇನೆ. ನಾನು ಬಾಡಿಗೆ ಮನೆಯಲ್ಲಿದ್ದು ಕುಟುಂಬದ ನಿರ್ವಹಣೆಗಾಗಿ ಉಳಿದ ಕ್ರಯದ ಹಣ ಖರ್ಚಾಗಿರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಮತ್ತು ನನ್ನ ತಂಗಿ ಇದ್ದೇವೆ. ನನ್ನ ತಂಗಿಗೆ ತಿಂಗಳಿಗೆ 5 ಸಾವಿರ ಸಂಬಳ ಬರುತ್ತದೆ. ಮನೆ ಬಾಡಿಗೆ ತಿಂಗಳಿಗೆ 7 ಸಾವಿರ ಇರುತ್ತದೆ. ಆ ಬಗ್ಗೆ ಬಾಡಿಗೆ ಕರಾರು ಪತ್ರ ಇರುತ್ತದೆ. ನನಗೆ ತಿಂಗಳಿಗೆ ಬಾಡಿಗೆಯನ್ನು ಹೊರತುಪಡಿಸಿ ಸುಮಾರು 10 ಸಾವಿರ ಕುಟುಂಬದ ಖರ್ಚು ಇರುತ್ತದೆಂದರೆ ಸರಿ. ಕ್ರಯದ ಹಣದ ಪೈಕಿ ಯಾವುದೇ ಹಣವನ್ನು ನನ್ನ ಸಹೋದರಿಯರಾಗಲೀ, ಅವರ ಮಕ್ಕಳಿಗಾಗಲೀ, ಸಂಬಂಧಿಕರಿಗಾಗಲೀ ಕೊಟ್ಟಿರುವುದಿಲ್ಲ.

ನನ್ನ ತಂದೆಗೆ ಸೇರಿದ ಆಸ್ತಿಗಳಲ್ಲಿ ನನ್ನ ಸಹೋದರಿಯರಿಗೆ ಯಾವುದೇ ಹಿಸ್ಸೆ ನೀಡಬಾರದೆಂದು ಅವುಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ನಾನೇ ನನ್ನ ಸ್ವಂತಕ್ಕೆ ಉಪಯೋಗಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**(ಇ.ಚಂದ್ರಕಲಾ)**

ಹಿರಿಯ ಸಿವಿಲ್ ಜಡ್ಜ್ ಮತ್ತು ಎಂಎಸಿಟಿ

ಅರಸೀಕೆರೆ, ದಿಃ27-6-2016